ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Thursday, the 31st July, 1980/Sravana 9,1902 S.E.

The House met in the Assembly Chamber, Vidhana Soudha, at Nine of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(to which oral answers were given)

Traffic on National High Way from Hubli to Dharwad

132 SRI. BHAVURAO DESHPANDE (Dharwad).—Will the Chief Minister be pleased to state.—

(a) whether it has come to the notice of the Government that the Vehicular Traffic is increased by leaps and bounds on the National High Way coming under the territorial limits of Hubli-Dharwad Corporation area ;

(b) whether Government intend to take any steps to convert this route into Double Road in view of the heavy Vehicular Traffic ?

SRI M. VEERAPPA MOILY (Minister for Finance) [on behalf of) SRI R GUNDU RAO (Chief Minister)].—

(a) Yes.

(b) This high way is already wider than the double road.

ಶ್ರೀ ಬಾವೂರಾವ್ ದೇಶಪಾಂಡೆ.—ಸನ್ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ಮತ್ತು ಧಾರವಾಡ ನಗರಗಳ ಮಧ್ಯದಲ್ಲಿ ಈ ಹೆದ್ದಾರಿ ಹಾದುಹೋಗುತ್ತದೆ. ಆ ರಸ್ತೆ ಅಗಲ ಇಲ್ಲ. ಹುಬ್ಬಳ್ಳಿ ಮತ್ತು ಧಾರವಾಡ ನಗರಗಳ ನಡುವೆ ಸ್ಕೂಲು, ಕಾಲೇಜುಗಳಿರುವುದರಿಂದ ಜನಗಳ ಓಡಾಟ ಜಾಸ್ತಿಯಾಗಿದೆ. ಈ ರೋಡು ಅಗಲ ಕಡಿಮೆ ಇದೆ. ಜೊತೆಗೆ ಓಡಾಟ ತಪ್ಪಿಸುವ ಸಲುವಾಗಿ ಬೈಪಾಸ್‌ರೋಡು ಮಾಡುವ ಪ್ರಪೋಸಲ್ ಇದೆಯೇ, ಇಲ್ಲವೇ ರೋಡು ಅಗಲ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಹುಬ್ಬಳ್ಳಿ ಮತ್ತು ಧಾರವಾಡ ಪಟ್ಟಣಗಳ ನಡುವೆ ಓಡಾಟವನ್ನು ಅವಾಯ್ಡ್ ಮಾಡುವುದಕ್ಕೆ ಬೈ ಪಾಸ್ ರೋಡು ಮಾಡಬೇಕು ಎಂಬ ಪ್ರಪೋಸಲ್ ಕೇಂದ್ರ ಸರ್ಕಾರಕ್ಕೆ ಹೋಗಿದೆ. ಅದರ ಪ್ರಕಾರ ಟೆನೇ ಪ್ಲಾನ್‌ನಲ್ಲಿ ಲ್ಯಾಂಡ್ ಅಕ್ವಿಸಿಷನ್ ಮಾಡಲಿಕ್ಕೆ ಎಲ್ಲಾ ತಯಾರು ಮಾಡುತ್ತಾ ಇದ್ದೇವೆ.

ಒಬ್ಬ ಸದಸ್ಯರು.—ಬೆಂಗಳೂರಿನಿಂದ ಹುಬ್ಬಳ್ಳಿವರೆಗೆ ಬೈಪಾಸ್ ರೋಡಿದೆ, ಹುಬ್ಬಳ್ಳಿಯಿಂದ ಧಾರವಾಡಕ್ಕೆ ಬೈಪಾಸ್ ರೋಡು ಮಾಡದೆ ತಡೆಗಟ್ಟಲಿಕ್ಕೆ ಕಾರಣವೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಹುಬ್ಬಳ್ಳಿ-ಧಾರವಾಡ ನಗರಗಳ ಮಧ್ಯೆ ವಾಹನ ಸಂಚಾರವನ್ನು ಅವಾಯ್ಡ್ ಮಾಡಬೇಕು ಎಂದು, ಅದಕ್ಕೆ ಬೈಪಾಸ್ ರೋಡು ಮಾಡಬೇಕು ಎಂದು ಭಾರತ ಸರ್ಕಾರದಲ್ಲಿ ಪ್ರಪೊಸಲ್ ಇದೆ. ಏನೇ ಪ್ಲಾನ್‌ನಲ್ಲಿ ಲ್ಯಾಂಡ್ ಅಕ್ವಿಸಿಷನ್‌ನಲ್ಲಿ ಸಾಕಷ್ಟು ಪ್ರಾವಿಜನ್ ಮಾಡುವುದಕ್ಕೆ ಸರ್ಕಾರ ಅಂದಾಜು ಮಾಡಿದೆ.

Manchanabele Irrigation Project in Bangalore District

402 SRI D.T. Mayanna (Huliyurdurga).— Will the Chief Minister be pleased to state :-

(a) the expenditure incurred for the Manchanabele Irrigation Scheme in Bangalore District so far ;

(b) the number of years required to complete this work ;

(c) whether there is any scheme to provide water to the Kanva Reservoir in the second stage of this irrigation scheme ;

(d) the difficulties coming in the way of Government in supplying water from this scheme to the Huliyurdurga hobli, a backward area in Kunigal Taluk ;

(e) whether Government intend to order for survey work if there are no difficulties before the Government ?

SRI M. VEERAPPA MOILY (Minister for Finance) [on behalf of] SRI R. GUNDU RAO (Chief Minister)].—

(a) 275.38 Lakh rupees were spent for Manchanabele Irrigation Scheme upto the end of February.

(b) According to the programme of work this Scheme will be completed by August 1981

(c) There is no proposal to supply water to Kanva reservoir as per the programme of work of the Manchanabele scheme.

(d) At present it is not possible to supply water from the Manchanab le scheme to Huliyurdurga Hobli.

(e) In view of reply to "D" this question does not arise.

ಶ್ರೀ ಡಿ ಟಿ ಮಾಯಣ್ಣ.- ಬೆಂಗಳೂರು ಜಿಲ್ಲಾ ಮಂಚನಬೆಲೆ ನೀರಾವರಿ ಯೋಜನೆ ೧೯೮೧ನೇ ಇಸವಿ ಆಗಸ್ಟ್‌ನಲ್ಲಿ ಮುಗಿಯುತ್ತದೆ ಎಂದು ಹೇಳಿದ್ದೀರಿ. ಇನ್ನೂ ಕೆಲಸ ಪ್ರಾರಂಭವಾಗಿಲ್ಲ ಇಷ್ಟು ನಿಧಾನ ಆಗುವುದಕ್ಕೆ ಕಾರಣವೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೆ, ೧೯೮೦-೮೧ನೇ ಸಾಲಿನ ಬಜೆಟ್‌ನಲ್ಲಿ ಇದಕ್ಕೆ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನ ಒದಗಿಸಿದ್ದಾರೆ. ೧೯೮೧ನೆ ಆಗಸ್ಟ್‌ನಲ್ಲಿ ಈ ಕಾರ್ಯವನ್ನು ಮುಗಿಸಬೇಕು ಎಂದು ಅಂದಾಜು ಇದೆ. ತಮಗೆ ತಿಳಿದ ಪ್ರಕಾರ ಆಗುವ ಸಾಧ್ಯವಿಲ್ಲ. ೧೯೮೨ನೇ ಅಂತ್ಯಕ್ಕೆ ಈ ಕಾರ್ಯಕ್ರಮ ಮುಗಿಸಬೇಕು ಎಂದು ಸರ್ಕಾರ ಅಂದಾಜು ಮಾಡಿದೆ.

ಶ್ರೀ ಡಿ.ಟಿ. ಮಾಯಣ್ಣ.—ಈ ಯೋಜನೆಯಿಂದ ಆರ್ಕಾವತಿ ವ್ಯಾಲಿಯಿಂದ ಶಿಂಶಾ ಹೋಬಳಿಗೆ ಅಂದರೆ ಕುಣಿಗಲ್ ತಾಲ್ಲೂಕಿನಲ್ಲಿ ಹಿಂದುಳಿದ ಪ್ರದೇಶವಾದ ಹುಲಿಯೂರು ದುರ್ಗ ಹೋಬಳಿಗೆ ಮತ್ತು ಮದ್ದೂರು ತಾಲ್ಲೂಕು ಹತ್ತೂರು ಹೋಬಳಿ—ಈ ಎರಡು ಹೋಬಳಿಗಳು ಮಾತ್ರ ಈ ನೀರಾವರಿ